"ಮಧುರ ಮಕ್ಕಳೇ- ಇದು ಸರ್ವಶಕ್ತಿವಂತನ ಸರ್ಕಾರವಾಗಿದೆ, ತಂದೆಯ ಜೊತೆ ಧರ್ಮರಾಜನೂ ಸಹ ಇದ್ದಾರೆ ಆದ್ದರಿಂದ ತಂದೆಗೆ ತಾವು ಮಾಡಿರುವ ಪಾಪವನ್ನು ತಿಳಿಸಿದ್ದೇ ಆದರೆ ಅರ್ಧ ಪಾಪವು ಕಡಿಮೆಯಾಗುತ್ತದೆ"

ಪ್ರಶ್ನೆ: ರಾಜಧಾನಿಯ ಮಾಲೀಕ ಮತ್ತು ಪ್ರಜೆಯಲ್ಲಿ ಸಾಹುಕಾರ ಪ್ರಜೆ ಯಾವ ಆಧಾರದ ಮೇಲೆ ಆಗುತ್ತಾರೆ?

ಉತ್ತರ: ರಾಜಧಾನಿಯಲ್ಲಿ ಮಾಲೀಕರಾಗಲು ವಿದ್ಯೆಯ ಕಡೆ ಪೂರ್ಣ ಗಮನ ಕೊಡಬೇಕು. ವಿದ್ಯೆಯಿಂದಲೇ ಪದವಿಯು ಪ್ರಾಪ್ತಿಯಾಗುತ್ತದೆ. ಸಾಹುಕಾರ ಪ್ರಜೆಗಳಾಗುವವರು ಜ್ಞಾನವನ್ನು ಪಡೆಯುತ್ತಾರೆ. ಸಹಯೋಗಿಗಳೂ ಆಗುತ್ತಾರೆ, ಪವಿತ್ರರೂ ಸಹ ಆಗಿರುತ್ತಾರೆ ಆದರೆ ವಿದ್ಯೆಯ ಕಡೆ ಪೂರ್ಣಗಮನ ಕೊಡುವುದಿಲ್ಲ. ವಿದ್ಯೆಯ ಕಡೆ ಗಮನ ಯಾವಾಗ ಬರುತ್ತದೆಯೆಂದರೆ ನಮಗೆ ಸ್ವಯಂ ಭಗವಂತ ಓದಿಸಲು ಬಂದಿದ್ದಾರೆ ಎಂಬ ಮೊಟ್ಟಮೊದಲನೇ ನಿಶ್ಚಯವಿರಬೇಕು. ಒಂದುವೇಳೆ ಪೂರ್ಣ ನಿಶ್ಚಯವಿಲ್ಲವೆಂದರೆ ಇಲ್ಲಿಯೇ ಕುಳಿತಿದ್ದರೂ ಸಹ ಏನೂ ತಿಳಿದುಕೊಳ್ಳುವುದಿಲ್ಲ. ಒಂದುವೇಳೆ ನಿಶ್ಚಯವಿದ್ದಿದ್ದೇ ಆದರೆ ನಿತ್ಯವೂ ಓದಬೇಕು ಮತ್ತು ಧಾರಣೆ ಮಾಡಿಕೊಳ್ಳಬೇಕಾಗಿದೆ.

ಗೀತೆ: ನಯನಹೀನನಿಗೆ ದಾರಿ ತೋರಿಸು ಪ್ರಭು............

ಓಂ ಶಾಂತಿ. ಕಲಿಯುಗಕ್ಕೆ ಅಂಧಕಾರ ಪ್ರಪಂಚವೆಂದು ಕರೆಯುತ್ತಾರೆ ಏಕೆಂದರೆ ಎಲ್ಲಾ ಆತ್ಮರು ಅಂಧರಾಗಿದ್ದಾರೆ ಆದರೆ ಕಣ್ಣಿಲ್ಲದಂತಹ ಕುರುಡರು ಎಂದಲ್ಲ. ಕುರುಡರ ನಗರದಲ್ಲಿ ಎಲ್ಲರೂ ಜ್ಞಾನನೇತ್ರಹೀನರು, ಅಂಧರ ಮಕ್ಕಳು ಅಂಧರಾಗಿದ್ದಾರೆ, ತಮೋಪ್ರಧಾನರಾಗಿದ್ದಾರೆ. ನಾವೆಲ್ಲಾ ಆತ್ಮಗಳ ತಂದೆಯು ಪರಮಾತ್ಮನಾಗಿದ್ದಾರೆ, ಯಾವಾಗ ನಾವೆಲ್ಲಾ ಆತ್ಮರು ಆ ಮೂಲವತನದಲ್ಲಿ ಇರುತ್ತೇವೆಯೋ ಆಗ ಜಾಗಂತ ಜ್ಯೋತಿಯಾಗಿರುತ್ತೇವೆ. ಮೊದಲು ಸತೋಪ್ರಧಾನ ಸತ್ಯವಾದ ಚಿನ್ನವಾಗಿದ್ದರು. ಸತ್ಯಯುಗಕ್ಕೆ ಸ್ವರ್ಣಿಮ ಯುಗವೆಂದು ಹೇಳಲಾಗುತ್ತದೆ. ಹಿಂದಿಯಲ್ಲಿ ಪಾರಸಪುರಿ ಎನ್ನಲಾಗುತ್ತದೆ. ಈಗ ಕಬ್ಬಿಣದಯುಗ ಅಂದರೆ ತಮೋಪ್ರಧಾನ ಕಲ್ಲುಬುದ್ಧಿಯಾಗಿದೆ. ಸತ್ಯಯುಗದಲ್ಲಿ ಮನೆ-ಮನೆಯಲ್ಲಿ ಬೆಳಕು ಇರುತ್ತದೆ. ಕಲಿಯುಗದಲ್ಲಿ ಮನೆ-ಮನೆಯಲ್ಲಿ ಅಂಧಕಾರವಿದೆ. ದೇವಿ-ದೇವತಾ ಧರ್ಮ ಪ್ರಾಯಲೋಪವಾಗಿಬಿಟ್ಟಿದೆ. ಎಲ್ಲರೂ ಧರ್ಮಭ್ರಷ್ಟ-ಕರ್ಮಭ್ರಷ್ಟರಾಗಿದ್ದಾರೆ. ತಮಗೆ ತಾವು ದೇವತೆಗಳೆಂದು ಕರೆಸಿಕೊಳ್ಳಲು ಸಾಧ್ಯವಿಲ್ಲ ಏಕೆಂದರೆ ವಿಕಾರಿಗಳಾಗಿದ್ದಾರೆ. ತಂದೆಯು ಸಾವರ್ಕರ್ ಎಂಬುವವರ ಉದಾಹರಣೆಯನ್ನು ಕೊಟ್ಟಿದ್ದರು. ಅವರು ಆದಿಸನಾತನ ದೇವಿ-ದೇವತಾಧರ್ಮವಿತ್ತು ಎಂದು ಹೇಳಿದ್ದರು. ನೀವು ಮತ್ತೆ ಆದಿಸನಾತನ ಹಿಂದೂ ಮಹಾಸಭಾ ಎಂದು ಏಕೆ ಹೇಳುತ್ತೀರಿ? ಅದಕ್ಕೆ ಹೇಳಿದರು.... ದಾದಾಜೀ, ಈಗ ನಮ್ಮನ್ನು ನಾವು ದೇವತೆಗಳೆಂದು ಹೇಳಿಕೊಳ್ಳಲು ಸಾಧ್ಯವಿಲ್ಲ ಏಕೆಂದರೆ ಅಪವಿತ್ರರಾಗಿದ್ದೇವೆ ಆದರೆ ಈಗ ದೇವತಾಧರ್ಮವು ಸ್ಥಾಪನೆಯಾಗುತ್ತಾ ಇದೆ ಏಕೆಂದರೆ ರಾಯಭಾರಿಗಳಾಗಿದ್ದೇವಲ್ಲವೆ. ಹೇಗೆ ಕ್ರೈಸ್ತನು ಬಂದಾಗ ಕ್ರಿಶ್ಚಿಯನ್ ಧರ್ಮವಿರಲಿಲ್ಲ. ಈ ಸಮಯವೂ ಸಹ ದೇವತಾ ಧರ್ಮವಿಲ್ಲ. ಈಗ ಬ್ರಾಹ್ಮಣರ ಧರ್ಮಸ್ಥಾಪನೆಯಾಗಿದೆ, ಬ್ರಾಹ್ಮಣರೇ ಮತ್ತೆ ದೇವಿ ದೇವತೆಗಳಾಗಬೇಕಾಗಿದೆ. ಪರಮಪಿತ ಪರಮಾತ್ಮ ಹೇಳುತ್ತಾರೆ ನಾನು ದೇವಿ ದೇವತಾ ಧರ್ಮದ ಸ್ಥಾಪನೆ ಮಾಡುವವನು, ನಾನು ನೀವು ಆತ್ಮಗಳ ಪಾರಲೌಕಿಕ ತಂದೆಯಾಗಿದ್ದೇನೆ. ನಾನು ನಿಮ್ಮೆಲ್ಲರನ್ನು ಕಳುಹಿಸಿಕೊಡುತ್ತೇನೆ. ಹೇಗೆ ಆ ಕ್ರಿಶ್ಚಿಯನ್ನರ ಧರ್ಮಪ್ರಚಾರಕ ಸಂಸ್ಥೆ ಇದೆ, ಹಾಗೆಯೇ ಇದು ದೇವತಾ ಧರ್ಮದ ಸಂಸ್ಥೆಯಾಗಿದೆ. ಸ್ವಯಂ ಪಾರಲೌಕಿಕ ಪರಮಪಿತ ಪರಮಾತ್ಮ ಹೇಳುತ್ತಾರೆ- ಮಕ್ಕಳೇ, ನೀವೆಲ್ಲರೂ ಏನೆಲ್ಲವನ್ನೂ ಕೇಳುತ್ತಾ ಬಂದಿದ್ದೀರಿ ಅದೆಲ್ಲವೂ ಅಸತ್ಯವಾಗಿದೆ. ಭಲೆ ನಾಟಕದನುಸಾರ ಪುನಃ ಇದು ಆಗಲೇಬೇಕು. ಆದರೆ ಈ ಮಾಯೆಯ ಬಂಧನದಿಂದ ಬಿಡಿಸುವುದಕ್ಕೆ ಕಲ್ಪ-ಕಲ್ಪವೂ ನಾನೇ ಬಂದು ತಿಳಿಸಿಕೊಡುತ್ತೇನೆ ಮತ್ತು ಬಂದು ಬ್ರಹ್ಮನ ಮೂಲಕ ದೇವತಾಧರ್ಮದ ಸ್ಥಾಪನೆ ಮಾಡಿಸುತ್ತಾ ಇದ್ದೇನೆ. ದ್ವಾಪರದಿಂದ ಪುನಃ ಅನೇಕಧರ್ಮಗಳು ಸ್ಥಾಪನೆಯಾಗುತ್ತದೆ, ಆ ಸಮಯದಲ್ಲಿ ದೇವತಾ ಧರ್ಮವಿರುವುದಿಲ್ಲ. ಅದಕ್ಕೆ ರಾವಣರಾಜ್ಯವೆಂದು ಹೇಳಲಾಗುತ್ತದೆ. ಗೀತೆಯು ಭಾರತದ ಸರ್ವೋತ್ತಮ ಶಾಸ್ತ್ರವಾಗಿದೆ ಏಕೆಂದರೆ ಭಗವಂತನೇ ನುಡಿಸಿದ್ದಾರೆ ಮತ್ತೆಲ್ಲಾ ಶಾಸ್ತ್ರಗಳು ಮನುಷ್ಯರಿಂದ ನುಡಿಸಲ್ಪಟ್ಟಿದೆ. ಕೃಷ್ಣನು ಸತ್ಯಯುಗದಲ್ಲಿ ಪ್ರಾಲಬ್ಧವನ್ನು ಪಡೆಯುತ್ತಾನೆ, ಈಗ ತಂದೆಯು ತಿಳಿಸುತ್ತಾರೆ- ಭಾರತದಲ್ಲಿ ಲಕ್ಷ್ಮೀ-ನಾರಾಯಣರ ರಾಜ್ಯವನ್ನು ಸ್ಥಾಪನೆ ಮಾಡಲು ನಾನು ಬಂದಿದ್ದೇನೆ. ಈ ರೀತಿಯಾಗಿ ಬೇರೆ ಗೀತೆಯನ್ನು ನುಡಿಸುವವರು ಹೇಳಲು ಸಾಧ್ಯವಿಲ್ಲ. ಭಗವಂತನೇ ಹೇಳುತ್ತಾರೆ- ಹೇ ಭಾರತವಾಸಿ ಮಕ್ಕಳೇ, ನಾನು ಬ್ರಹ್ಮನ ಮೂಲಕ ದೇವತಾ ಧರ್ಮದ ಸ್ಥಾಪನೆಯನ್ನು ಮಾಡಲು ಬಂದಿದ್ದೇನೆ. ಮೊದಲು ಬ್ರಹ್ಮಾರವರ ಮುಖಾಂತರ ಬ್ರಾಹ್ಮಣರು ಬೇಕಾಗಿದ್ದಾರೆ. ದೇವತೆಗಳಂತೂ ಪ್ರಾಲಬ್ಧವನ್ನು ಭೋಗಿಸುತ್ತಾರೆ ಅವರು ಯಾರದೇ ಕಲ್ಯಾಣವನ್ನು ಮಾಡುವುದಿಲ್ಲ. ಅವರಂತೂ ರಾಜರಾಗಿರುತ್ತಾರೆ. ಅಲ್ಲಿ ಸಂಪತ್ತು ಬಹಳಷ್ಟಿರುತ್ತದೆ. ಮಾಯೆಯು ಇರುವುದಿಲ್ಲ ಆದ್ದರಿಂದ ಅದಕ್ಕೆ ಸ್ವರ್ಗವೆಂದು ಕರೆಯಲಾಗುತ್ತದೆ. ಈಗ ಭಾರತವು ನರಕವಾಗಿದೆ, ಅದರಮೇಲೆ ವಿಜಯವನ್ನು ಪಡೆಯುವುದರಿಂದ ನೀವು ಸ್ವರ್ಗಕ್ಕೆ ಮಾಲೀಕರಾಗುತ್ತೀರಿ. ಗೀತೆಯನ್ನು ಹೇಳುವವರು ಯಾರೂ ಸಹ ಕಾಮ ಮಹಾಶತ್ರುವೆಂದು

ಹೇಳಲು ಸಾಧ್ಯವಿಲ್ಲ. ಭಲೆ ಇಡೀ ಭಾರತದಲ್ಲೆಲ್ಲಾ ಹುಡುಕಿ- ಯಾರೂ ಸಹ ಈ ರೀತಿ ಹೇಳಲು ಸಾಧ್ಯವಿಲ್ಲ ಏಕೆಂದರೆ ಎಲ್ಲರೂ ವಿಕಾರಿಗಳೇ ಆಗಿದ್ದಾರೆ. ಆ ಬಡಪಾಯಿಗಳಿಗೆ ಇದು ಅಂತಿಮ ಜನ್ಮವೆಂದು ತಿಳಿದಿಲ್ಲ. ತಂದೆಯು ತಿಳಿಸುತ್ತಾರೆ- ಇವರದು ಬಹಳ ಜನ್ಮಗಳ ಅಂತಿಮ ಜನ್ಮವಾಗಿದೆ, ಇವರಲ್ಲಿ ನಾನು ಪ್ರವೇಶ ಮಾಡುತ್ತೇನೆ ಅರ್ಥಾತ್ ಈಗ ಇಡೀ ಸೃಷ್ಟಿಯ ಅಂತ್ಯವಾಗಿದೆ. ಈ ಒಂದು ಜನ್ಮಕ್ಕಾಗಿ ನೀವು ಪವಿತ್ರತೆಯ ಪಣವನ್ನು ತೊಡಬೇಕು. ಇದು ಯಾವುದೇ ಅಸತ್ಯವಾದ ಮಾತಲ್ಲ. ಮಹಾಭಾರಿ ಯುದ್ಧವನ್ನೂ ಸಹ ನೋಡುತ್ತಿದ್ದೀರಿ. ಅಲ್ಪಸ್ವಲ್ಪ ರಿಹರ್ಸಲ್ ಸಹ ನಡೆಯುತ್ತಿರುತ್ತದೆ. ಮಕ್ಕಳು ವಿನಾಶ ಮತ್ತು ಸ್ಥಾಪನೆಯ ಸಾಕ್ಷಾತ್ಕಾರವನ್ನು ನೋಡಿದ್ದೀರಿ. ಇದರಿಂದ ಅಂತಿಮಜನ್ಮವೆಂದು ಸಿದ್ಧವಾಗುತ್ತದೆ. ಗೀತೆಯನ್ನು ಹೇಳುವವರು ಈ ರೀತಿ ಹೇಳುವುದಿಲ್ಲ- ಇದು ಅಂತಿಮ ಜನ್ಮವಾಗಿದೆ ಆದಕಾರಣ ಪವಿತ್ರತೆಯ ಪಣ ತೊಡಬೇಕಾಗಿದೆ. ನಿಮ್ಮದು ರಾಜಯೋಗವಾಗಿದೆ. ನೀವು ರಾಜ್ಯವನ್ನು ಪಡೆಯಲು ತಪಸ್ಸನ್ನು ಮಾಡುತ್ತೀರಿ. ಈಗ ಈ ಸತ್ಯಸಂಪಾದನೆಯನ್ನು ಮಾಡಿಕೊಳ್ಳಬೇಕು. ಈ ಅಂತಿಮ ಜನ್ಮದಲ್ಲಿ ಕಲ್ಲಿನ ಸಮಾನವಾಗಿರುವವರಿಂದ ಪಾರಸನಾಥರಾಗುತ್ತೀರಿ. ಸಂಪೂರ್ಣ ಶ್ರೇಷ್ಠ ಪದವಿಯನ್ನು ಪಡೆಯುತ್ತೀರಿ.

ಯಾರು ನನ್ನ ಹಳೆಯ ಮಕ್ಕಳಾಗಿದ್ದಾರೆಯೋ ಅವರನ್ನು ಮಾಯೆಯು ಭಸ್ಮೀಭೂತರನ್ನಾಗಿ ಮಾಡಿದೆಯೋ ಅವರನ್ನು ಬಂದು ಜಾಗೃತ ಮಾಡಿದ್ದೇನೆ. ನೀವು ಸುಂದರವಾಗಿದ್ದಿರಿ, ಈಗ ಎಲ್ಲರೂ ತಮೋಪ್ರಧಾನರಾಗಿದ್ದಾರೆ. ಆತ್ಮವೇ ಕಪ್ಪು ಮತ್ತು ಸುಂದರವಾಗುತ್ತದೆ. ಆತ್ಮನಿಗೆ ನಿರ್ಲೇಪವೆಂದು ಹೇಳುವುದು ಪೂರ್ಣ ಅಸತ್ಯದ ಮಾತಾಗಿದೆ. ಆತ್ಮವು ತನ್ನ ಸಂಸ್ಕಾರವನ್ನು ತೆಗೆದುಕೊಂಡು ಹೋಗುತ್ತದೆ. ನೀವು ಮಕ್ಕಳು ಈಶ್ವರೀಯ ಮತದಲ್ಲಿದ್ದೀರಿ ಎಂದು ತಂದೆಯು ತಿಳಿಸುತ್ತಾರೆ. ಯುರೋಪಿಯನ್ನರು ಭಾರತದಲ್ಲಿ ದೇವಿ-ದೇವತೆಗಳ ರಾಜಧಾನಿಯಿತ್ತೆಂದು ಹೇಳುತ್ತಾರೆ. ಭಗವಾನ್ ರಾಮ, ಭಗವತಿ ಸೀತೆಯೆಂದು ಇವರಿಗೆ ಹೇಳಲು ಸಾಧ್ಯವಿಲ್ಲ. ಬಾಕಿ ಎಲ್ಲವೂ ಮನುಷ್ಯ ಸೃಷ್ಟಿಯಾಗಿದೆ. ಹೇಗೆ ಕ್ರಿಸ್ತನು ಬಂದು ಧರ್ಮಸ್ಥಾಪನೆ ಮಾಡಿದರು ಆಗ ಕ್ರಿಶ್ಚಿಯನ್ನರು ಇರಲಿಲ್ಲ. ಹಾಗೆಯೇ ಈಗ ದೇವತಾಧರ್ಮವು ಪ್ರಾಯಃಲೋಪವಾಗಿದೆ. ಎಲ್ಲದಕ್ಕಿಂತಲೂ ಉತ್ತಮಧರ್ಮ ದೇವತಾಧರ್ಮವಾಗಿದೆ. ತಂದೆಯು ತಿಳಿಸುತ್ತಾರೆ- ನಾನು ಮೊಟ್ಟಮೊದಲು ಈ ಆತ್ಮಿಕ ಬ್ರಾಹ್ಮಣ ಧರ್ಮವನ್ನು ರಚಿಸುತ್ತೇನೆ. ಈ ಆತ್ಮೀಯ ಬ್ರಾಹ್ಮಣರು ಪರಮಧಾಮ ಮಾರ್ಗವನ್ನು ತೋರಿಸುತ್ತಾರೆ. ಭಕ್ತರಿಗೆ ಮನೆಯಲ್ಲಿಯೇ ಭಗವಂತ ಸಿಗುತ್ತಾರೆಂದು ಹೇಳಲಾಗುತ್ತದೆ. ಮೊದಲನೇ ನಂಬರಿನಲ್ಲಿ ಭಕ್ತರು ದೇವತೆಗಳೇ ಆಗುತ್ತಾರೆ, ಅವರೇ ಮೊಟ್ಟಮೊದಲು ದ್ವಾಪರದಲ್ಲಿ ಭಕ್ತಿಮಾರ್ಗವನ್ನು ಪ್ರಾರಂಭ ಮಾಡಿದರು. ಸೋಮನಾಥ ಮಂದಿರವನ್ನು ಕಟ್ಟಿಸಿದರು ಎಂಬುದನ್ನು ಸ್ಪಷ್ಟವಾಗಿ ತಂದೆಯು ತಿಳಿಸುತ್ತಾರೆ. ಯಾರು ರಾಜಧಾನಿಯಲ್ಲಿ ಮಾಲೀಕರಾಗುವವರಿದ್ದಾರೆಯೋ ಮತ್ತು ಪ್ರಜೆಗಳಲ್ಲಿಯೂ ಸಾಹುಕಾರರಾಗುವವರಿದ್ದಾರೆ ಅವರೇ ಈ ಜ್ಞಾನವನ್ನು ತೆಗೆದುಕೊಳ್ಳುತ್ತಾರೆ. ಪ್ರಜೆಗಳಲ್ಲಿ ಶ್ರೀಮಂತರಾಗುವವರು ಜ್ಞಾನವನ್ನೂ ಕೇಳುತ್ತಾರೆ, ಬೀಜವನ್ನೂ ಹಾಕುತ್ತಾರೆ, ಪವಿತ್ರವಾಗಿಯೂ ಇರುತ್ತಾರೆ ಆದರೆ ಪೂರ್ಣವಿದ್ಯೆಯನ್ನು ಓದುವುದಿಲ್ಲ. ತಂದೆಯು ತಿಳಿಸುತ್ತಾರೆ- ಮಕ್ಕಳೇ, ಇದು ವಿದ್ಯೆಯಾಗಿದೆ. ವಿದ್ಯೆಯಿಂದಲೇ ಪದವಿಯು ಸಿಗುತ್ತದೆ. ಬಹಳ ಶ್ರೇಷ್ಠಕ್ಕಿಂತ ಶ್ರೇಷ್ಠ ಪದವಿಯಾಗಿದೆ. ಮೊಟ್ಟಮೊದಲು ಭಗವಂತ ನಾವು ಮಕ್ಕಳಿಗೆ ಓದಿಸುತ್ತಾರೆ ಕೃಷ್ಣನು ಓದಿಸುವುದಿಲ್ಲ ಎನ್ನುವ ನಿಶ್ಚಯವಿರಬೇಕು. ಈ ವಿದ್ಯೆಯಿಂದಲೇ ಕೃಷ್ಣರಾಗುತ್ತೇವೆ. ರಾಜಕುಮಾರ-ಕುಮಾರಿಯರು ನೀವೆಲ್ಲರೂ ಆಗುತ್ತೀರಿ. ನಿಶ್ಚಯವಿಲ್ಲದೇ ಇರುವವರು ಈ ಶಾಲೆಯಲ್ಲಿ ಏನೂ ತಿಳಿಯದೇ ಇರುವವರ ರೀತಿಯಲ್ಲಿ ಕುಳಿತಿರುತ್ತಾರೆ. ಪ್ರತಿನಿತ್ಯ ಓದಬೇಕು ಇಲ್ಲವೆಂದರೆ ಸ್ವಲ್ಪವೂ ತಿಳಿದಿಲ್ಲ ಎಂದರ್ಥವಾಗಿದೆ. ಈಗ ಅವಿನಾಶಿ ತಂದೆಯ ಮೂಲಕ ಅವಿನಾಶಿ ಪ್ರಾಲಬ್ಧವು ಸಿಗುತ್ತದೆ. ಇದೆಲ್ಲವೂ ಸ್ಮಶಾನವಾಗುತ್ತದೆ. ನಾವು ತಯಾರಾಗುವವರೆಗೆ ಸ್ವಲ್ಪ ಜನ ಉಳಿದಿರುತ್ತಾರೆ ನಂತರ ಅವರೂ ಸಮಾಪ್ತಿಯಾಗುತ್ತಾರೆ. ನಾವೆಲ್ಲರೂ ಕಲ್ಪದ ಮೊದಲೂ ಸಹ ಇದೆಲ್ಲವನ್ನೂ ನೋಡಿದ್ದೆವು ಈಗ ನೋಡುತ್ತಿದ್ದೇವೆ. ಈಗ ತಂದೆಯು ಹೇಳುತ್ತಾರೆ- 5000 ವರ್ಷದ ನಂತರ ಈ ಧರ್ಮವನ್ನು ಸ್ಥಾಪನೆ ಮಾಡುತ್ತಿದ್ದೇನೆ ಏಕೆಂದರೆ ಯಾರಲ್ಲಿಯೂ ಬ್ರಹ್ಮಾಂಡ ಮತ್ತು ಸೃಷ್ಟಿಯ ಆದಿ-ಮಧ್ಯ-ಅಂತ್ಯದ ಜ್ಞಾನವಿಲ್ಲ. ತಂದೆಯು ತಿಳಿಸುತ್ತಾರೆ ಬ್ರಹ್ಮಾಂಡವೆಂದರೆ ಅಲ್ಲಿ ಆತ್ಮಗಳು ಅಂಡಾಕಾರದಲ್ಲಿರುತ್ತವೆ, ಆ ಸನ್ಯಾಸಿಗಳು ಬ್ರಹ್ಮತತ್ವವನ್ನೇ ಈಶ್ವರನೆಂದು ಹೇಳುತ್ತಾರೆ. ಬ್ರಹ್ಮ್ ಎಂದರೆ ತತ್ವ. ಪರಮಪಿತ ಪರಮಾತ್ಮನು ಶಿವನಾಗಿದ್ದಾನೆ. ಆ ಮನುಷ್ಯರು ಬ್ರಹ್ಮೋಹಂ ಮತ್ತು ಶಿವೋಹಂ ಎಂದು ಹೇಳುತ್ತಾರೆ ಆದರೆ ಶಿವ, ಬ್ರಹ್ಮ-ವಿಷ್ಣು-ಶಂಕರರ ರಚೈತನಾಗಿದ್ದಾರೆ. ನಂದೀಗಣ ಎಂದರೆ ಅದು ಪ್ರಾಣಿಯಾಯಿತು. ಗೋಶಾಲೆ ಎನ್ನುವ ಅಕ್ಷರವನ್ನು ಹೇಳಿರುವ ಕಾರಣ ಅಲ್ಲಿ ಎತ್ತನ್ನು ತೋರಿಸುತ್ತಾರೆ. ಮಂದಿರಗಳಲ್ಲಿಯೂ ಲಕ್ಷ್ಮೀ-ನಾರಾಯಣ, ರಾಮ-ಸೀತೆಯರ ಚಿತ್ರವಿದೆ. ಇವರು ಉನ್ನತವಾದ ಪ್ರಾಲಬ್ಧವನ್ನು ಪಡೆಯುತ್ತಾರೆ, ಪ್ರಜೆಗಳೂ ಸಹ ಪ್ರಾಲಬ್ಧವನ್ನು ಪಡೆಯುತ್ತಾರೆ. ಲಕ್ಷ್ಮೀ-ನಾರಾಯಣ ದಿ ಫಸ್ಟ್, ದಿ ಸೆಕೆಂಡ್, ದಿ ಥರ್ಡ್ ಹೀಗೆ 8 ಪೀಳಿಗೆಗಳು ನಡೆಯುತ್ತವೆ. ಮಕ್ಕಳು ರಾಜ್ಯವನ್ನು ಮಾಡುತ್ತಾರೆ. ರಾಮ-ಸೀತೆಯರದೂ ಹೀಗೆಯೇ ನಡೆಯುತ್ತದೆ ನಂತರ ಜಗದಂಬಾ ಆದಿದೇವಿ, ಬ್ರಹ್ಮಾ ಆದಿದೇವ ಎನ್ನುವ ಗಾಯನವಿದೆ. ಆಡಂ ಈವ್, ಈಗ ಕಪ್ಪಾಗಿದ್ದಾರೆ ನಂತರ ಸುಂದರನಾಗುತ್ತಾರೆ. ಪ್ರಪಂಚದವರು ಈ ಮಾತುಗಳನ್ನು ತಿಳಿದುಕೊಂಡಿಲ್ಲ. ಕಾಳಿ, ದುರ್ಗಾ, ಅಂಬಾ ಇದೆಲ್ಲಾ ಒಬ್ಬರದೇ ಹೆಸರಾಗಿದೆ. ನಿಜವಾದ ಹೆಸರು ಸರಸ್ವತಿಯಾಗಿದೆ. ಆತ್ಮವೇ ಕಪ್ಪಾಗುತ್ತದೆ, ಬಾಕಿ ಮುಖವೇನೂ ಕಪ್ಪಾಗಿರುವುದಿಲ್ಲ. ಈ ಸಮಯದಲ್ಲಿ ಎಲ್ಲಾ ಆತ್ಮರೂ ಕಪ್ಪಾಗಿದ್ದಾರೆ. ನಾವೆಲ್ಲರೂ ಕೋತಿಗಳ ಸಮಾನ ಇದ್ದೆವು ಈಗ ತಂದೆಯು ನಮ್ಮನ್ನು ತನ್ನ ಸೇನೆಯನ್ನಾಗಿ ಮಾಡಿಕೊಂಡಿದ್ದಾರೆ. ಈಗ ರಾವಣನ ಮೇಲೆ ವಿಜಯವನ್ನು ಪಡೆಯುತ್ತಿದ್ದೇವೆ.

ತಂದೆಯು ತಿಳಿಸುತ್ತಾರೆ- ನಾನು ನಿಮಗೆ ಎಲ್ಲಾ ವೇದ-ಶಾಸ್ತ್ರಗಳ ಸಾರವನ್ನು ಬ್ರಹ್ಮನ ಮೂಲಕ ತಿಳಿಸುತ್ತೇನೆ. ಬ್ರಹ್ಮನ ಕೈಯಲ್ಲಿ ಶಾಸ್ತ್ರಗಳನ್ನು ತೋರಿಸುತ್ತಾರೆ. ಶಾಸ್ತ್ರವು ಒಂದೇ ಆಗಿದೆ, ಅವರ ಕೈಯಲ್ಲಿರುವುದು ಶಿರೋಮಣಿ ಗೀತೆಯಾಗಿದೆ. ತಂದೆಯು ಬ್ರಹ್ಮನ ಮೂಲಕ ಎಲ್ಲಾ ವೇದ-ಶಾಸ್ತ್ರಗಳ ಸಾರವನ್ನು ತಿಳಿಸುತ್ತಾರೆ. ಅದಕ್ಕೆ ಗೀತೆ ಎಂದು ಹೇಳಲಾಗುತ್ತದೆ ಬಾಕಿ ಯಾವುದೇ ಶಾಸ್ತ್ರವಿಲ್ಲ. ಗೀತೆಯಲ್ಲಿ ಭಗವಾನುವಾಚ ಇದೆ- ಕಾಮ ಮಹಾಶತ್ರುವಾಗಿದೆ. ಗೀತೆಯನ್ನು ತಿಳಿಸುವವರಿಗೆ ಹೇಳಬೇಕಾಗಿದೆ- ಇದರ ಮೇಲೆ ವಿಜಯವನ್ನು ಪಡೆಯಿರಿ ಆಗ ಸ್ವರ್ಗಕ್ಕೆ ಮಾಲೀಕರಾಗುತ್ತೀರಿ. ಅವರು ಎಂದೂ ಈ ರೀತಿ ಹೇಳುವುದಿಲ್ಲ. ಎಲ್ಲವೂ ಅಸತ್ಯವೇ ಹೇಳುತ್ತಿರುತ್ತಾರೆ. ನಾವೂ ಸಹ ಅಸತ್ಯವನ್ನೇ ಹೇಳುತ್ತಿದ್ದೆವು, ನಾವೂ ಬಹಳಷ್ಟು ಜನರನ್ನು ಗುರುಗಳನ್ನಾಗಿ ಮಾಡಿಕೊಂಡಿದ್ದೆವು, ಅರ್ಜುನನಿಗೆ ಇದೆಲ್ಲವನ್ನೂ ಮರೆತುಬಿಡು ಎಂದು ಹೇಳಲಾಗಿದೆ. ನಿಮ್ಮ ಈ ಗುರುಗಳನ್ನೂ ಪಾವನ ಮಾಡುವವನು ನಾನಾಗಿದ್ದೇನೆ, ಈಗ ನೀವೆಲ್ಲರೂ ಏನನ್ನು ಓದಿದ್ದೀರೋ ಅದೆಲ್ಲವನ್ನೂ ಮರೆತುಬಿಡಿ. ಕೇಳದೇ ಇರುವುದನ್ನು ಈಗ ನಾನು ತಿಳಿಸುತ್ತೇನೆ. ಈಗ ನೀವು ಕವಡೆಯಿಂದ ವಜ್ರಸಮಾನರಾಗುತ್ತೀರಿ. ಈಗ ಇದೆಲ್ಲವೂ ಸಮಾಪ್ತಿಯಾಗಲಿದೆ. ನೀವು ಮಕ್ಕಳು ವಿನಾಶ ಮತ್ತು ಸ್ಥಾಪನೆಯನ್ನು ನೋಡಿದ್ದೀರಿ ಆದಕಾರಣ ಪುರುಷಾರ್ಥವನ್ನು ಮಾಡುತ್ತಿದ್ದೀರಿ. ತಂದೆಯ ಬಳಿ ಎಲ್ಲರ ಲೆಕ್ಕವಿರುತ್ತದೆ. ಕೆಲವು ಮಕ್ಕಳು ಬರೆಯುತ್ತಾರೆ- ನಾವು ಇಂತಹ ಪಾಪಿಗಳಾಗಿದ್ದೆವು, ಇಂತಹ ಪಾಪವನ್ನು ಮಾಡಿದ್ದೇವೆ. ಏಕೆಂದರೆ ಧರ್ಮರಾಜ ತಂದೆಯು ಹೇಳುತ್ತಾರೆ- ನನಗೆ ತಿಳಿಸುವುದರಿಂದ ಅರ್ಧ ಕ್ಷಮಿಸುತ್ತೇನೆ. ಇದೆಲ್ಲವೂ ಗುಪ್ತವಾಗಿದೆ ಇರುತ್ತದೆ. ಇದು ಸರ್ವಶಕ್ತಿವಂತನ ಸರ್ಕಾರವಾಗಿದೆ. ಇದು ಇನ್ನೂ ಚಿಕ್ಕವೃಕ್ಷವಾಗಿದೆ. ಇದರ ಮಾಲಿ ಸ್ವಯಂ ಭಗವಂತನಾಗಿದ್ದಾರೆ, ನಿಧಾನವಾಗಿ ವೃದ್ಧಿಯಾಗುತ್ತಾ ಹೋಗುತ್ತದೆ. ಮಾಯೆಯು ತಕ್ಷಣ ಬಾಡಿಸಿಬಿಡುತ್ತದೆ. ಇಲ್ಲಿಯ ಮಾತನ್ನು ಅಲ್ಲಿ ಕಥೆಯ ರೂಪದಲ್ಲಿ ಹೇಳುತ್ತಾರೆ. ಅಲ್ಲಿ ಲಕ್ಷ್ಮೀ-ನಾರಾಯಣರು, ಮರ್ಯಾದಾ ಪುರುಷೋತ್ತಮರು. ಪುರುಷೋತ್ತಮ ಎಂದರೆ ಮಹಾನ್ ಪವಿತ್ರರಾಗಿದ್ದರು. ಇಲ್ಲಿ ಎಲ್ಲರೂ ಅಪವಿತ್ರವಾಗಿದ್ದಾರೆ. ಅದು ಪವಿತ್ರ ಗೃಹಸ್ಥ ಆಶ್ರಮ ಧರ್ಮವಾಗಿತ್ತು. ಈಗ ಅಪವಿತ್ರ ಗೃಹಸ್ಥ ಅಧರ್ಮವಾಗಿದೆ. ಪ್ರಪಂಚವು ಹೇಗೆ ನಡೆಯುತ್ತದೆಯೆಂದು ಕೇಳುತ್ತಾರೆ. ತಂದೆಯು ಹೇಳುತ್ತಾರೆ - ಈ ಪ್ರಪಂಚವೇ ಇರುವುದಿಲ್ಲ ಸಮಾಪ್ತಿಯಾಗಲಿದೆ. ಇದು ಅಂತಿಮ ಜನ್ಮವಾಗಿದೆ ಆದಕಾರಣ ಕಾಮಕಟಾರಿ ನಡೆಸುವುದನ್ನು ಬಿಟ್ಟುಬಿಡಿ. ನಿಮಗೆ ಜನ್ಮ-ಜನ್ಮಾಂತರ ವಿಕಾರಿ ತಾಯಿ-ತಂದೆಯಿಂದ ವಿಷದ ಆಸ್ತಿ ಸಿಗುತ್ತಾ ಬಂದಿದೆ. ಈಗ ನಾನು ಆಜ್ಞೆಯನ್ನು ಹೊರಡಿಸುತ್ತೇನೆ- ವಿಷದ ಆಸ್ತಿಯನ್ನು ಸಮಾಪ್ತಿ ಮಾಡಿರಿ ಇಲ್ಲವೆಂದರೆ ವೈಕುಂಠಕ್ಕೆ ಹೋಗಲು ಸಾಧ್ಯವಿಲ್ಲ. ವಿಕಾರಗಳ ಮೇಲೆ ವಿಜಯಗಳಿಸಿದರೆ ಸ್ವರ್ಗಕ್ಕೆ ಹೋಗುತ್ತೀರಿ ಇಲ್ಲವೆಂದರೆ ಪಾತಾಳ. ರಾಮರಾಜ್ಯ ಆಕಾಶವಾಗಿದೆ, ರಾವಣರಾಜ್ಯ ಪಾತಾಳವಾಗಿದೆ. ಇದು ನಾಟಕವಾಗಿದೆ. ಈ ಸಮಯದಲ್ಲಿ ದೇವತಾಧರ್ಮದವರು ಬೇರೆ ಧರ್ಮಗಳಿಗೆ ಮತಾಂತರವಾಗಿದ್ದಾರೆ. ತನ್ನ ನಿಜವಾದ ಧರ್ಮವನ್ನು ತಿಳಿದಿಲ್ಲ. ಬೇರೆ ಧರ್ಮದಲ್ಲಿ ಸ್ವಲ್ಪ ದಿನಗಳ ಸುಖವನ್ನು ನೋಡಿದರೆ ತಕ್ಷಣ ಮತಾಂತರವಾಗಿಬಿಡುತ್ತಾರೆ. ಒಂದುವೇಳೆ ಯಾರಾದರೂ ಬಿಳಿ ಸುಂದರ ಒಳ್ಳೆ ಸ್ತ್ರೀ ಸಿಕ್ಕಿದರೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದುತ್ತಾರೆ ಇದಕ್ಕೆ ಹಾಫ್ ಕಾಸ್ಟ್ ಎಂದು ಹೇಳಲಾಗುತ್ತದೆ. ಇಲ್ಲೂ ಸಹ ಯಾರು ಬ್ರಾಹ್ಮಣ ಕ್ಲಾಸ್ನಲ್ಲಿ ಬಂದು ಪುರುಷಾರ್ಥದಲ್ಲಿ ಬಲಹೀನರಾಗಿದ್ದರೆ ಅವರಿಗೆ ಪ್ರಜಾಪದವಿಯು ಸಿಗುತ್ತದೆ. ತಂದೆಯು ಸ್ಪಷ್ಟವಾಗಿ ತಿಳಿಸುತ್ತಾರೆ.

ಋಷಿ-ಮುನಿಗಳು ತ್ರಿಕಾಲದರ್ಶಿಗಳಾಗಿದ್ದರು ಎಂದು ಹೇಳುತ್ತಾರೆ. ಆದರೆ ಯಾವಾಗ ಜಗತ್ತು ಮಿಥ್ಯವೆಂದು ಹೇಳುತ್ತಾರೆ ಆಗ ಅವರಿಗೆ ತ್ರಿಕಾಲದರ್ಶಿಗಳೆಂದು ಹೇಗೆ ಹೇಳಲು ಸಾಧ್ಯವಿಲ್ಲ. ಬಹಳ ಸುಳ್ಳನ್ನೇ ಹೇಳಿದ್ದಾರೆ . ಇಂತಹವರು ನಿರ್ವಾಣಧಾಮಕ್ಕೆ ಹೋದರು ಎಂದು ಹೇಳುತ್ತಾರೆ ಇದೂ ಸಹ ಸುಳ್ಳಾಗಿದೆ. ಎಲ್ಲರೂ ತಮ್ಮ ಪಾತ್ರವನ್ನಭಿನಯಿಸಲು ಇಲ್ಲಿ ಹಾಜರಾಗಲೇಬೇಕಾಗಿದೆ. ಎಲ್ಲರ ಮಾರ್ಗದರ್ಶಕರು ತಂದೆಯಾಗಿದ್ದಾರೆ. ಬಾಬಾ ಯಾರಿಂದಲೂ ಭಕ್ತಿಯನ್ನು ಬಿಡಿಸುವುದಿಲ್ಲ. ಎಲ್ಲಿವರೆಗೆ ಪರಿಪಕ್ವ ಅವಸ್ಥೆಯು ಬರುವುದಿಲ್ಲವೊ ಅಲ್ಲಿಯವರೆಗೆ ಭಲೆ ಭಕ್ತಿ ಮಾಡುತ್ತಿರಲಿ. ನೆನಪಿಡಬೇಕು- ನಾವು ಯಾರಿಗೂ ಗುರು ಅಲ್ಲಾ, ಹೇಗೆ ನೀವು ಕೇಳಿಸಿಕ್ಕೊಳ್ಳುತ್ತಿರುವಿರೋ ಹಾಗೆಯೇ ನಾನೂ ಸಹ ಶಿವತಂದೆಯಿಂದ ಕೇಳುತ್ತಿದ್ದೇನೆ. ನಮ್ಮೆಲ್ಲರ ಗುರು ಒಬ್ಬ ನಿರಾಕಾರನಾಗಿದ್ದಾನೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಈ ಅಂತಿಮ ಜನ್ಮದಲ್ಲಿ ಪವಿತ್ರತೆಯ ಪ್ರತಿಜ್ಞೆಯ ಪಣ ತೊಡಬೇಕು. ಆತ್ಮವು ಕಪ್ಪಾಗಿರುವುದರಿಂದ ಸುಂದರ ಸತೋಪ್ರಧಾನವನ್ನಾಗಿ ಮಾಡುವ ಪುರುಷಾರ್ಥ ಮಾಡಬೇಕಾಗಿದೆ.

2. ಅವಿನಾಶಿ ಪ್ರಾಲಬ್ಧವನ್ನು ರೂಪಿಸಿಕೊಳ್ಳಲು ನಿಶ್ಚಯಬುದ್ಧಿಯವರಾಗಬೇಕು. ವಿದ್ಯೆಯನ್ನು ಪ್ರತಿನಿತ್ಯ ಓದಬೇಕಾಗಿದೆ. ಬಾಕಿ ಇಲ್ಲಿಯತನಕ ಓದಿರುವುದನ್ನು ಬುದ್ಧಿಯಿಂದ ಮರೆಯಬೇಕಾಗಿದೆ.

ವರದಾನ: ವಿಜಯದ ಉಮಂಗ-ಉತ್ಸಾಹದ ಮುಖಾಂತರ ಭರವಸಾಹೀನರನ್ನೂ ಸಹ ಭರವಸೆಯಲ್ಲಿ ಪರಿವರ್ತನೆ

ಮಾಡುವಂತಹ ನಿಶ್ಚಯ ಬುದ್ಧಿ ಭವ

ಒಂದುವೇಳೆ ನಿಶ್ಚಯ ಅಖಂಡಿತವಾಗಿದ್ದರೆ ವಿಜಯ ಸದಾ ಇದ್ದೇ ಇರುವುದು, ವಿಜಯದ ಉಮಂಗ-ಉತ್ಸಾಹ ಸದಾ ಇರಬೇಕು, ಭರವಸಾಹೀನ ಸಂಸ್ಕಾರ ಇರಬಾರದು. ಯಾವುದೇ ಕಷ್ಟಕರವಾದ ಕೆಲಸವಾದರೂ ಇಷ್ಟು ಸಹಜ ಅನುಭವವಾಗಲಿ ಹೇಗೆ ಇದು ದೊಡ್ಡಮಾತೇ ಅಲ್ಲ ಏಕೆಂದರೆ ಅನೇಕಬಾರಿ ಈ ಕಾರ್ಯ ಮಾಡಿದ್ದೇನೆ, ಯಾವುದೇ ಹೊಸ ಮಾತು ಮಾಡುತ್ತಿಲ್ಲ, ಆದ್ದರಿಂದ ಭರವಸೆ ಇಲ್ಲದ ಹೆಸರು ಗುರುತೂ ಸಹ ಇಲ್ಲದಂತಿರಲಿ, ಯಾವುದೇ ಸ್ವಭಾವ-ಸಂಸ್ಕಾರದಲ್ಲಿಯೂ ಸಹ ಈ ಸಂಕಲ್ಪ ಎಂದೂ ಬರದಿರಲಿ ಇವರು ಪರಿವರ್ತನೆ ಯಾಗುವರೊ ಇಲ್ಲವೊ ಗೊತ್ತಿಲ್ಲ, ಸದ ವಿಜಯಿಯಾಗೆ ಇದ್ದಾರೆ.

ಸ್ಲೋಗನ್: ಶಕ್ತಿಶಾಲಿಗಳಾಗಬೇಕಾದರೆ ಸದಾ ಖಜಾನೆಗಳ ಸ್ಮೃತಿ ಮತ್ತು ಸ್ಮರಣೆಯಲ್ಲಿರಿ.